# ಜಿಲ್ಲಾ ಪಂಚಾಯತ್ ಹಾಸನ

## ಅಧಿಕೃತ ಜ್ಞಾಪನ

ವಿಷಯ:- 2012-13ನೇ ಸಾಲಿನ ಕೇಂದ್ರ ಪುರಸ್ಕೃತ ಯೋಜನೆ ಅಸ್ಪೃಶ್ಯತಾ ನಿವಾರಣೆಗಾಗಿ ಅಂತರ್ ಜಾತಿ ವಿವಾಹದ ದಂಪತಿಗಳಿಗೆ ಪ್ರೋತ್ಸಾಹ ಧನ ಪಾವತಿ ಬಗ್ಗೆ.

ಉಲ್ಲೇಖ:- (1) ಸರ್ಕಾರದ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ:ಸಕಇ/ಸಿಎಸ್-5/ಸಿಆರ್/ಬೆಂಗಳೂರು/ದಿನಾಂಕ:25-9-2012.

(2) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಹಾಸನ ರವರ ಪತ್ರ ಸಂಖ್ಯೆ:ಜಿಸಕಇ/ಡಿ2/ಸಿಆರ್-4/2012-13/ದಿನಾಂಕ:14-10-2012.

-0-

**ಪ್ರಸ್ತಾವನೆ**

ಉಲ್ಲೇಖ(1)ರಲ್ಲಿನ ಆದೇಶದಲ್ಲಿ ಜಿಲ್ಲಾಪಂಚಾಯತ್ ನಿಧಿ/ತಾಲ್ಲೂಕು ಪಂಚಾಯತ್ ನಿಧಿ ಲೆಕ್ಕ ನಿರ್ವಹಣೆ ಬಗ್ಗೆ ವಿವರಿಸಿದೆ. ಅದರಂತೆ ಜಿಲ್ಲಾಪಂಚಾಯತ್/ತಾಲ್ಲೂಕು ಪಂಚಾಯತ್ ನಿಧಿಗಳನ್ನು ಜಿಲ್ಲಾಪಂಚಾಯತ್/ತಾಲ್ಲೂಕು ಪಂಚಾಯತ್ ಆಯಾ ನಿಧಿ-I, II ಹಾಗೂ III ಎಂದು ಮೂರು ಭಾಗಗಳಾಗಿ ವಿಂಗಡಿಸಿದೆ. ಅದರಂತೆ ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳು ಆಯಾ ನಿಧಿಗಳಲ್ಲಿ ಬರುವ ಯೋಜನೆಯಲ್ಲಿನ ಸ್ವೀಕೃತಿ ಮತ್ತು ವೆಚ್ಚಗಳನ್ನು ಲೆಕ್ಕ ಇಡಬೇಕಾಗಿದೆ.

2012-13ನೇ ಸಾಲಿಗೆ ಪರಿಶಿಷ್ಠ ಜಾತಿ, ಪರಿಶಿಷ್ಠ ವರ್ಗಗಳ ದೌರ್ಜನ್ಯ ನಿಯಂತ್ರಣ ಅಧಿನಿಯಮ 1989ರಡಿ ಅಸ್ಪೃಶ್ಯತಾ ನಿವಾರಣೆಗಾಗಿ ಕಾರ್ಯಕ್ರಮ ಅಂತರ್ ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ ಮಂಜೂರಾತಿಗಾಗಿ ರೂ 7.50 ಲಕ್ಷಗಳ ಅನುದಾನ ಯೋಜನೆಯಡಿ ಲೆಕ್ಕಶೀರ್ಷಿಕೆ 2225-01-197-6-05 ರಡಿ ಬಿಡುಗಡೆ ಮಾಡಿದೆ. ಉಲ್ಲೇಖ(2)ರ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕೋರಿಕೆ ಪತ್ರದಲ್ಲಿ ಈ ಅನುದಾನವನ್ನು ಜಿಲ್ಲೆಯ 8 ತಾಲ್ಲೂಕು ಪಂಚಾಯಿತಿಗಳಿಗೆ ಮರು ಬಿಡುಗಡೆ ಮಾಡಲು ಕೋರಿದ್ದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸಂಖ್ಯೆ:ಜಿಪಂಹಾ/ಆರ್ಥಿಕ/BUD-1/TPG-12/2012-13** **ದಿನಾಂಕ:30-10-2012**

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದಂತೆ 2012-13ನೇ ಸಾಲಿನ ಅಂತರ್ ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ ಮಂಜೂರಾತಿಗಾಗಿ ಸರ್ಕಾರವು ಉಲ್ಲೇಖ(1)ರ ಆದೇಶದಲ್ಲಿ ರೂ 7.50 ಲಕ್ಷ ಅನುದಾನವನ್ನು ಲೆಕ್ಕಶೀರ್ಷಿಕೆ 2225-01-197-6-05 (ಯೋಜನೆ) ಬಿಡುಗಡೆ ಮಾಡಿದ್ದು, ಈ ಅನುದಾನವನ್ನು ಉಲ್ಲೇಖ(2)ರ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕೋರಿಕೆಯಂತೆ ಜಿಲ್ಲೆಯ 8 ತಾಲ್ಲೂಕು ಪಂಚಾಯಿತಿಗಳಿಗೆ ಮರು ಬಿಡುಗಡೆ ಮಾಡಿ ಆದೇಶಿಸಿದೆ.

ಹೀಗೆ ಬಿಡುಗಡೆ ಮಾಡಲಾಗಿರುವ ಅನುದಾನವನ್ನು ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಗಳು, ಆಯಾಯ ತಾಲ್ಲೂಕುಗಳಿಗೆ ಸಂಬಂಧಿಸಿದ ಅನುದಾನವನ್ನು ಬಿಳಿ ಬಣ್ಣದ ಬಿಲ್ಲಿನಲ್ಲಿ ಸರ್ಕಾರದ ಲೆಕ್ಕಕ್ಕೆ ವೆಚ್ಚ ಭರಿಸಿ ಹಳದಿ ಬಣ್ಣದ ಚಲನ್ ಮೂಲಕ ಆಯಾಯ ತಾಲ್ಲೂಕು ಪಂಚಾಯತಿ ನಿಧಿ- Iಕ್ಕೆ ಜಮಾ ಮಾಡಿಕೊಳ್ಳಲು ತಿಳಿಸಿದೆ ಹಾಗೂ ಬಿಳಿ/ಹಳದಿ ಬಣ್ಣದ ಪೇಯೀಸ್ ರಸೀದಿ ಮತ್ತು ಹಳದಿ ಚಲನ್ ಮೇಲೆ ತಾಲ್ಲೂಕು ಪಂಚಾಯತ್ ನಿಧಿ-1 ಎಂದು ಮೊಹರು ಹಾಕುವುದು.

ಈ ರೀತಿ ತಾಲ್ಲೂಕು ಪಂಚಾಯತಿ ನಿಧಿ-Iಕ್ಕೆ ಜಮಾ ಮಾಡಿಕೊಂಡ ಅನುದಾನವನ್ನು ನಿಯಮಾನುಸಾರ ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಅಧಿಕಾರಿಗಳಿಗೆ ಒಂದೇ ಕಂತಿನಲ್ಲಿ ಪೂರ್ಣ ಹಣ ಬಿಡುಗಡೆ ಮಾಡಿ ಅದರ ಒಂದು ಪ್ರತಿಯನ್ನು ಈ ಕಛೇರಿಗೆ ಕಳುಹಿಸಲು ಸೂಚಿಸಿದೆ.

ಈ ಅನುದಾನವನ್ನು ನಿಯಮಾನುಸಾರ ಆಯಾಯ ಸಕ್ಷಮ ಪ್ರಾಧಿಕಾರಿಗಳಿಂದ ಕ್ರಿಯಾ ಯೋಜನೆಗಳಿಗೆ ಅನುಮೋದನೆ ಪಡೆದುಕೊಂಡು ಖರ್ಚು ಭರಿಸಲು ತಿಳಿಸಿದೆ. ವೆಚ್ಚ ಭರಿಸುವಾಗ ಬಿಲ್ಲಿನ ಮೇಲೆ ತಾಲ್ಲೂಕು ಪಂಚಾಯತ್ ನಿಧಿ-I ಎಂದು ಮೊಹರು ಹಾಕಲು ಹಾಗೂ ಈ ವೆಚ್ಚವನ್ನು 2225-00-101-0-05 ಯೋಜನೆಯಡಿ ಭರಿಸುವಂತೆ ಅನುದಾನ ಮರು ಬಿಡುಗಡೆ (ಅನುಷ್ಠಾನಾಧಿಕಾರಿಗಳಿಗೆ) ಮಾಡುವ ಆದೇಶದಲ್ಲಿ ಸೂಚಿಸುವುದು.

-2)

**Grant No-13**

ZP. Order No:ZPH/BUD-1/TPG-12/2012-13/Dated:30/10/2012

HASSAN ZILLA PANCHAYAT

HASSAN DIST:CODE-410 (Rs.in Lakhs)

| SL NO | Name of the Taluks | D.O.Code | 2225-01-197-6-05 | |
|---|---|---|---|---|
| | | | Plan | Non-Plan |
| 1 | ಹಾಸನ | 1300QQ0002 | 1.60 | – |
| 2 | ಆಲೂರು | 1301QQ0001 | 0.30 | – |
| 3 | ಅರಕಲಗೂಡು | 1302QQ0001 | 0.30 | – |
| 4 | ಅರಸೀಕೆರೆ | 1303QQ0001 | 1.10 | – |
| 5 | ಬೇಲೂರು | 1304QQ0001 | 1.50 | – |
| 6 | ಚನ್ನರಾಯಪಟ್ಟಣ | 1305QQ0084 | 1.50 | – |
| 7 | ಹೊಳೆನರಸೀಪುರ | 1306QQ0006 | 0.60 | – |
| 8 | ಸಕಲೇಶಪುರ | 1307QQ0001 | 0.60 | – |
| | ಒಟ್ಟು | | 7.50 | 0 |

(ಒಟ್ಟು ಏಳು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ)

(ಸಹಿ)
ಮುಖ್ಯ ಲೆಕ್ಕಾಧಿಕಾರಿ
ಜಿಲ್ಲಾಪಂಚಾಯತ್,ಹಾಸನ.

**ಪ್ರತಿಯನ್ನು:-**

1. ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು, ಜಿಲ್ಲಾಪಂಚಾಯತ್,ಹಾಸನ ರವರ ಮಾಹಿತಿಗೆ ಸಲ್ಲಿಸಿದೆ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಪಂಚಾಯತ್, ಹಾಸನ ರವರ ಮಾಹಿತಿಗೆ ಸಲ್ಲಿಸಿದೆ.
3. ಉಪಕಾರ್ಯದರ್ಶಿಗಳು (ಆಡಳಿತ) ಮತ್ತು (ಅಭಿವೃದ್ಧಿ), ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ ರವರ ಮಾಹಿತಿಗೆ.
4. ಸರ್ಕಾರದ ಕಾರ್ಯದರ್ಶಿಗಳು, ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗೆ ಸಲ್ಲಿಸಿದೆ.
5. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು ರವರ ಮಾಹಿತಿಗೆ ಸಲ್ಲಿಸಿದೆ.
6. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ವಿಧಾನ ಸೌಧ, ಬೆಂಗಳೂರು ರವರ ಮಾಹಿತಿಗೆ ಸಲ್ಲಿಸಿದೆ.
7. ಜಿಲ್ಲಾ ಖಜಾನಾಧಿಕಾರಿಗಳು, ಖಜಾನೆ ಇಲಾಖೆ, ಹಾಸನ ರವರ ಮಾಹಿತಿಗೆ ಕಳುಹಿಸಿದೆ.
8. ಉಪ ಖಜಾನಾಧಿಕಾರಿಗಳು ____________ ತಾಲ್ಲೂಕು ರವರ ಮಾಹಿತಿಗೆ ಕಳುಹಿಸಿದೆ.
9. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ಹಾಸನ ರವರ ಮಾಹಿತಿಗೆ ಕಳುಹಿಸಿದೆ.
10. ಕಛೇರಿ ಪ್ರತಿ.

ಮುಖ್ಯ ಲೆಕ್ಕಾಧಿಕಾರಿ
ಜಿಲ್ಲಾಪಂಚಾಯತ್,ಹಾಸನ.

DSW)